

ಹೇಳುವಾಗ, ಈಗ ಇರುವ ವಿದ್ಯಾರ್ಥಿಗಳ ಪೋಷಕರಿಗೂ ಆತ್ಮವಿಶ್ವಾಸ ಚಿಗುರುತ್ತದೆ. ಇದನ್ನು 'ಪೋಷಕರಿಗಾಗಿ ಪೋಷಕರ ಸಹಾಯಕ ಕಾರ್ಯಕ್ರಮ' ಎನ್ನುತ್ತೇವೆ.

–ಪೋಷಕರ ಸಬಲೀಕರಣ ಕಾರ್ಯಕ್ರಮವು ಬಹುತೇಕ ಅಮ್ಮಂದಿರನ್ನು ತರಬೇತಿ ನೀಡಲು ಶೀಘ್ರ ಸಿದ್ಧಗೊಳಿಸುತ್ತದೆ. . ಪೋಷಕರ ಸಾಕ್ಷರತಾ ಕಾರ್ಯಕ್ರಮದ ಮೂಲಕ ಅನಕ್ಷರಸ್ಥ ಪೋಷಕರಿಗೆ ಸಾಕ್ಷರತೆಯನ್ನೂ ನೀಡಲಾಗುತ್ತದೆ. ಅಮ್ಮಂದಿರಿಗೆ ಗಣಕಯಂತ್ರ ತರಬೇತಿ ನೀಡಲಾಗುತ್ತದೆ. ಮಗುವಿಗೆ ತಂತ್ರಜ್ಞಾನ ಬಳಸಿ ಪಾಠ ಹೇಳಿಕೊಡುವುದನ್ನು ಅಲಿಷಾಳ ತಾಯಿಯೂ ಶೀಘ್ರ ಕಲಿತಳು. ಪ್ರಿ––ಸ್ಕೂಲ್‌ನಲ್ಲಿ ಶಿಕ್ಷಕರ ಸಲಹೆ ಸೂಚನೆಗಳನ್ನು ಅನುಸರಿಸಿ ತರಬೇತಿ ನೀಡಿದಳು. 6 ವರ್ಷ ತುಂಬಿದಾಗ ಆಲಿಷಾ ಮಾತು, ಭಾಷೆ, ಓದು, ಬರಹ, ಲೆಕ್ಕ ಎಲ್ಲವನ್ನು ಕಲಿತು ಸಾಮಾನ್ಯ ಶಾಲೆಗೆ ಸೇರಲು ಸಿದ್ಧವಾಗಿದ್ದಳು.

ಇಲ್ಲಿಗೆ ಮೊದಲ ಹಂತ ಮುಗಿಯುತ್ತದೆ. ಎರಡನೆಯ ಹಂತ ಸಾಮಾನ್ಯ ಶಾಲೆಗಳಲ್ಲಿ ಇತರ ಮಕ್ಕಳ ಜತೆ ಸೇರಿ ಈ ಮಗುವೂ ವಿದ್ಯಾಭ್ಯಾಸ ಮಾಡುವುದು. ಈ ಹಂತದಲ್ಲಿ ಅಮ್ಮಂದಿರಿಗೆ ದುಗುಡ ಸಹಜ. ಬೇರೆ ಮಕ್ಕಳ ಜತೆಗೆ ತನ್ನ ಮಗು ಹೊಂದಿಕೊಳ್ಳಬಹುದೆ.. ಎನ್ನುವ ಪ್ರಶ್ನೆ ಬಹುವಾಗಿ ಕಾಡುತ್ತದೆ. ಅಲಿಷಾಳ ತಾಯಿಗೂ ಈ ದುಗುಡವಿತ್ತು. ಆದರೆ ಸಂಸ್ಥೆಯಲ್ಲಿನ ಅಧ್ಯಾಪಕ ವರ್ಗ ಅವರಿಗೆ ಶಾಲೆಯಲ್ಲಿ ಸಿಗಬಹುದಾದ ಸೌಲಭ್ಯಗಳನ್ನೆಲ್ಲಾ ವಿವರಿಸಿ ಧೈರ್ಯ ತುಂಬಿತು.

ಆಲಿಷಾ ಸಾಮಾನ್ಯ ಶಾಲೆಗೆ ಸೇರಿದಳು. ಆದರೆ ಆಲಿಷಾಳಿಗೆ ನಿರೀಕ್ಷಿಸಿದಂತೆ ಸಹಕಾರ, ಬೆಂಬಲ ಸಿಗಲಿಲ್ಲ. ಅವಳಿಗೆ ಕಲಿಕಾ ಸಾಮರ್ಥ್ಯವಿಲ್ಲ ಎಂಬಂತೆ ಶಿಕ್ಷಕರು, ಸಹಪಾಠಿಗಳು, ಇತರ ಪೋಷಕರು ವರ್ತಿಸತೊಡಗಿದರು. ಅಲಿಷಾಳ ಅಮ್ಮ ಅಳುತ್ತಾ ನಮ್ಮ ಸಂಸ್ಥೆಗೆ ಬಂದು ವಿಷಯ ತಿಳಿಸಿದಳು.

ಈ ಸಮಸ್ಯೆಗೂ ಒಂದು ಪರಿಹಾರವಿದೆ. ಸಂಸ್ಥೆಯ ವತಿಯಿಂದ ಇಟಿನರೆಂಟ್ ಸ್ಪೀಚ್ ಥೆರಪಿಸ್ಟ್ (ಸಂಚಾರಿ ವಾಕ್ ಭಾಷಾ ತಜ್ಞರು) ಆ ಶಾಲೆಗೆ ತೆರಳುತ್ತಾರೆ. ಅಲ್ಲಿನ ಶಿಕ್ಷಕರಿಗೆ ಈ ಮಕ್ಕಳ ಸಾಮರ್ಥ್ಯದ ಕುರಿತು, ಮಕ್ಕಳಿಗೆ ಒದಗಿಸಬೇಕಾದ ಸೌಕರ್ಯಗಳ ಕುರಿತು ಸುದೀರ್ಘ ಮಾಹಿತಿ ನೀಡುತ್ತಾರೆ. ಅಲಿಷಾಳ ಪ್ರಕರಣವನ್ನೂ ಹೀಗೆಯೇ ನಿಭಾಯಿಸಲಾಯಿತು. ಆ ಬಳಿಕ ಶಾಲೆಯ ವಾತಾವರಣವೇ ಬದಲಾಯಿತು. ಅಂದಿನಿಂದ ಶಾಲೆಯಲ್ಲಿ ಸೂಕ್ತವಾಗಿ ಹೊಂದಿಕೊಂಡಳು ಆಲಿಷಾ. ಆಕೆಯ ತಾಯಿ ಆಗಿಂದಾಗ್ಗೆ ಬಂದು ಮಗುವಿಗೆ ತರಬೇತಿ ನೀಡುವ ಕುರಿತು ಎಲ್ಲ ತಜ್ಞರೊಂದಿಗೆ ಮಾಹಿತಿ ಪಡೆಯುತ್ತಿದ್ದರು. ಪ್ರೌಢಶಾಲೆಗೆ ಬಂದಾಗ ಆಲಿಷಾಗೆ ಲೆಕ್ಕ ಬಹಳ ಕಠಿಣ ಎನಿಸತೊಡಗಿತು. ಮತ್ತೆ ಸಂಸ್ಥೆಯು ಪಠ್ಯಕ್ರಮ ಸಹಾಯಕ ಸೇವೆಯ ಮೂಲಕ ಅವಳಿಗೆ ತರಬೇತಿ ನೀಡಿತು. ಈ ರೀತಿ ವಾಕ್ ಭಾಷಾ ತರಬೇತಿ ನಿರಂತರವಾಗಿ ಸಾಗಿತು.

ಈಗ ಆಲಿಷಾಳಿಗೆ 16 ವರ್ಷ. ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶಕ್ಕಾಗಿ ತಂದೆ ತಾಯಿಯೊಡನೆ ಆಕೆ  ಕಾಯುತ್ತಿದ್ದಳು. ಅಂತೂ ಗಂಟೆ 11 ಆಯ್ತು. ನಿರೀಕ್ಷಿಸಿದಂತೆ ಫಲಿತಾಂಶ ಬಂತು. ಪ್ರಥಮ ದರ್ಜೆಯಲ್ಲಿ ಅಲಿಷಾ ಉತ್ತೀರ್ಣಳಾಗಿದ್ದಳು. ತಂದೆ ತಾಯಿಯ ಸಂತೋಷಕ್ಕೆ ಪಾರವೇ ಇರಲಿಲ್ಲ. ಸಿಹಿ ತಂದವರೇ ನೇರ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಗೆ ಬಂದು ಸಂತಸ ಹಂಚಿಕೊಂಡರು.

★★★

ಈ ಆಲಿಷಾ ಒಂದು ಕಲ್ಪನೆಯ ಹೆಸರು ಅಷ್ಟೆ; ಆದರೆ ಕಲ್ಪನೆಯ ಪಾತ್ರವಲ್ಲ. ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಪ್ರತಿನಿತ್ಯ ಇಂತಹ ನೂರಾರು ಅಲಿಷಾಗಳು ಹಾಗೂ ಅವಳ/ ಅವನ ಪೋಷಕರು ಪರಿಹಾರಕ್ಕಾಗಿ ಬರುತ್ತಾರೆ. ಸತತ 50 ವರ್ಷಗಳಿಂದ ಇಂತಹ ಹಲವಾರು ಪೋಷಕರಿಗೆ ಹಾಗೂ ಸಂವಹನ ನ್ಯೂನ್ಯತೆಯುಳ್ಳ ಮಕ್ಕಳ ಪಾಲಿಗೆ ಸಂಜೀವಿನಿಯಂತೆ ತನ್ನ 11 ವಿಭಾಗಗಳೊಂದಿಗೆ ಪರಿಣಾಮಕಾರಿಯಾಗಿ ಸಂಸ್ಥೆಯು ಸೇವೆ ನೀಡುತ್ತಿದೆ. ಬಹು ತಜ್ಞರ ತಂಡ ಒಂದೇ ಸೂರಿನಡಿಯಲ್ಲಿ ಸೇವಾ ಮನೋಭಾವದೊಂದಿಗೆ ಕೈ ಜೋಡಿಸಿ ಸಂಸ್ಥೆಯ ಸೇವಾ ಗುಣಮಟ್ಟವನ್ನು ಉತ್ತುಂಗದಲ್ಲಿ ಕಾಪಾಡಿಕೊಂಡು ಬಂದಿದೆ. ಇ.ಎನ್.ಟಿ ವೈದ್ಯರು, ಶ್ರವಣ ಶಾಸ್ತ್ರಜ್ಞರು, ವಾಕ್ ಭಾಷಾ ತಜ್ಞರು, ಮನೋ ವಿಜ್ಞಾನಿಗಳು, ವಿಶೇಷ ಶಿಕ್ಷಕರು, ಫಿಸಿಯೋ ಥೆರಪಿಸ್ಟ್‌ಗಳು, ಆಕ್ಯುಪೇಷನ್ ಥೆರಪಿಸ್ಟ್‌ಗಳು– ಹೀಗೆ ಎಲ್ಲಾ ಬಗೆಯ ಬಹು ತಜ್ಞರ ತಂಡ ಇಲ್ಲಿದೆ.

ದೋಷವುಳ್ಳ ಮಕ್ಕಳಿಗೆ ಮಾತ್ರವಲ್ಲ, ಮೆದುಳಿನ ಪಾರ್ಶ್ವವಾಯು ಉಳ್ಳವರು, ಬುದ್ಧಿಸೂಚ್ಯಂಕ ಕಡಿಮೆ ಇರುವವರು, ಕಲಿಕಾ ನ್ಯೂನ್ಯತೆ ಉಳ್ಳವರಿಗೂ ಇಲ್ಲಿ ಸೇವೆಗಳನ್ನು ಒದಗಿಸಲಾಗುತ್ತದೆ. ದೂರ ಸಂಪರ್ಕ ಶಿಕ್ಷಣ ನೀಡುವುದು, ಆಸ್ಪತ್ರೆಗಳಿಗೆ, ಶಾಲೆಗಳಿಗೆ ತೆರಳಿ ಸ್ಕ್ರೀನಿಂಗ್ ಮಾಡುವುದು, ಸಾರ್ವಜನಿಕ ಶಿಕ್ಷಣ ನೀಡುವ ಮೂಲಕ ಜಾಗೃತಿ ಮೂಡಿಸುವುದು, ಶಿಕ್ಷಕರಿಗೆ, ಪೋಷಕರಿಗೆ, ವಿಶೇಷ ಶಿಕ್ಷಕರಿಗೆ, ಸಿಬ್ಬಂದಿಗೆ ವಿವಿಧ ಸಂಕಿರಣ, ಕಾರ್ಯಾಗಾರ, ಸಮ್ಮೇಳನಗಳನ್ನು ಏರ್ಪಡಿಸಿ ಕ್ಷೇತ್ರದ ಬಗ್ಗೆ ಮಾಹಿತಿ ನೀಡುವ ಮೂಲಕ ಸಾಮಾಜಿಕ ಸೇವೆಯನ್ನು ಈ ಸಂಸ್ಥೆ ಒದಗಿಸುತ್ತಿದೆ.

(ಡಾ. ಪುಷ್ಪಾವತಿ ಮೈಸೂರಿನ AIISH ಸಂಸ್ಥೆಯಲ್ಲಿ special educaion ವಿಭಾಗದ ಮುಖ್ಯಸ್ಥರು. ಸಂಪರ್ಕ: 94493 23811/ ಲೀಲಾರಾಣಿ ವಿಶೇಷ ಶಿಕ್ಷಕರು.)